# ನಿರ್ಮಮತೆಯೇ ಮೋಕ್ಷ

ಕೆ. ಎ. ಲಕ್ಷ್ಮೀನಾರಾಯಣ

**'ನಾನು','ನನ್ನದು' ಎಂಬ ಅಹಂಭಾವವನ್ನು ಬಿಟ್ಟರೆ ಮಾತ್ರ ಮುಕ್ತಿ ಸಾಧ್ಯ ಎಂಬುದನ್ನು ಮನಮುಟ್ಟುವ ಪ್ರಸಂಗಗಳಿಂದ ನಿರೂಪಿಸಿರುವ ಶ್ರೀ ಲಕ್ಷ್ಮೀನಾರಾಯಣ ಅವರು ಹಲವಾರು ಧಾರ್ಮಿಕ ಸಂಸ್ಥೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವುದೇ ಅಲ್ಲದೇ ಅನೇಕ ವರ್ಷಗಳಿಂದ ಮೈಸೂರು ರಾಮಕೃಷ್ಣ ಆಶ್ರಮದ ನಿಕಟ ಭಕ್ತರಾಗಿದ್ದಾರೆ.**

ಶ್ರೀ ಕನಕದಾಸರ ಜೀವನದಲ್ಲಿ ಒಂದು ಸ್ವಾರಸ್ಯಕರವಾದ ಪ್ರಸಂಗ ಬರುತ್ತದೆ. ಒಮ್ಮೆ ಕನಕದಾಸರು ಅವರ ಗುರುಗಳಾದ ಶ್ರೀ ವ್ಯಾಸರಾಯರ ಸಮಕ್ಷಮ ಇತರ ಅನೇಕ ಶಿಷ್ಯರೊಂದಿಗೆ ಇದ್ದಾಗ ಗುರುಗಳು ಕನಕದಾಸರನ್ನು ಕುರಿತು 'ಕನಕ, ನಿಮ್ಮಲ್ಲಿ ಯಾರಿಗೆ ಎಷ್ಟೆಷ್ಟು ಜನ್ಮಕ್ಕೆ ಮೋಕ್ಷ ದೊರೆಯುವುದು ಹೇಳುವೆಯಾ?' ಎಂದು ಕೇಳಿದರು. ಅದಕ್ಕೆ ಕನಕದಾಸರು 'ಗುರುಗಳು ಅರಿಯದ ವಿಷಯ ವೇನಿರುವುದು? ಆದರೂ ಕೇಳಿದರೆ ಹೇಳು ವೆನು 'ಎಂದರು. ಆಗ ಗುರುಗಳು 'ನಮ್ಮ ಗುರುಗಳಿಗೆ ಇನ್ನೆಷ್ಟು ಜನ್ಮದಲ್ಲಿ ಮುಕ್ತಿ ದೊರೆಯುವುದು'ಎಂದು ಕೇಳಲು ಕನಕದಾಸರು 'ನಾಲ್ಕು ಜನ್ಮಗಳಲ್ಲಿ' ಎಂದರು. 'ನನಗೆ' ಎಂದು ಗುರುಗಳು ಕೇಳಲು 'ಆರು ಜನ್ಮಗಳಲ್ಲಿ' ಎಂದರು. ಗುರುಗಳು 'ಹಾಗಾದರೆ ಈ ಜನ್ಮ ಮುಗಿದೊಡನೆ ಹೋಗುವವರು ಯಾರೂ ಇಲ್ಲವೊ? ನೀನು? ' ಎಂದು ಕೇಳಿದರು. ಅದಕ್ಕೆ ಕನಕದಾಸರು ನಗುತ್ತಾ 'ನಾನು ಹೋದರೆ ಹೋಗಬಹುದು' ಎಂದರು. ಅದನ್ನು ಕೇಳಿ ಗುರುಗಳೂ ನಕ್ಕರು. ಇದನ್ನು ಕೇಳಿ ಅಲ್ಲಿದ್ದ ಎಲ್ಲರಿಗೂ ಕೋಪವೋ ಕೋಪ. 'ಈ ಕುರುಬನ ತಲೆ ತಿರುಗಿದೆ. ನಮ್ಮ ಗುರುಗಳಿಗೂ, ಪರಮ ಗುರು ಗಳಿಗೂ ಇಲ್ಲದ ಮುಕ್ತಿ ಈ ಕುರುಬನಿಗೆ ಈ ಜನ್ಮ ಕಳೆದೊಡನೆ ಸಿಗುವುದೇ? ಎಂತಹ ಅಹಂಕಾರದ ಮಾತು! ಇದನ್ನು ಕೇಳಿಯೂ ನಮ್ಮ ಗುರುಗಳು ನಗುತ್ತಿದ್ದಾರೆ. ಶಿಷ್ಯನಿಗೆ ಈ ರೀತಿ ಸಲಿಗೆಯನ್ನು ಕೊಟ್ಟು, ಅವನ ಅಹಂಕಾರವನ್ನು ಹೆಚ್ಚಿಸುತ್ತಾ ಇದ್ದಾರೆ' ಎಂದು ಗೊಣಗುತ್ತಿದ್ದರು. ಅದನ್ನರಿತ ಗುರುಗಳು ಶಿಷ್ಯರಿಗೆ 'ಕನಕನಾಡಿದ ಮಾತು ಜಂಬದ ಮಾತಲ್ಲ. ಅವನು ಹೇಳಿದ ಮಾತಿನ ಅರ್ಥವನ್ನು ನೀವು ತಿಳಿಯಲಿಲ್ಲ. ಯಾರೇ ಆಗಲಿ ಅವನಲ್ಲಿರುವ "ನಾನು" ಎಂಬ ಅಹಂಭಾವವನ್ನು ಬಿಟ್ಟರೆ ಅವನಿಗೆ ಮುಕ್ತಿ' ಎಂದು ಹೇಳಲು " ನಾನು ಹೋದರೆ ಹೋಗಬಹುದು" ಎಂದನು' ಎಂದು ತಿಳಿಸಿದರು.

> "ನಮ್ಮ ಮನೆಯನ್ನಾಗಲಿ, ನಮ್ಮ ಮಕ್ಕಳನ್ನಾಗಲಿ ಅಥವಾ ನಮ್ಮ ದೇಹವನ್ನೂ ಕೂಡ ನಾವು ನಮ್ಮ ಆಸ್ತಿಯಾಗಿ ಪಡೆದಿಲ್ಲ. ಅವು ಎಚ್ಚರಿಕೆಯಿಂದ, ಗೌರವದಿಂದ ನೋಡಿಕೊಳ್ಳುವುದಕ್ಕಾಗಿ ನಮಗೆ ತಾತ್ಕಾಲಿಕವಾಗಿ ನೀಡಲ್ಪಟ್ಟಿವೆ."
>
> —ಜಾಕ್ ಕಾರ್ನ್‌ಫೀಲ್ಡ್ (Jack Kornfield)

ಈ ವಿಷಯಕ್ಕೆ ಸಂಬಂಧಿಸಿದಂತೆ ರಾಮಾಯಣದಲ್ಲೂ (ಆನಂದ ರಾಮಾಯಣ) ಒಂದು ಸ್ವಾರಸ್ಯಕರವಾದ ಘಟನೆ ಬರುತ್ತದೆ. ಶ್ರೀರಾಮನು ರಾಜ್ಯವಾಳುತ್ತಿದ್ದಾಗ ವಯಸ್ಸಾದ ಅವನ ತಾಯಿಯರು ಮೋಕ್ಷದ ಮಾರ್ಗವನ್ನು ತಿಳಿಯಲು ಅವನ ಹತ್ತಿರ ಬರುತ್ತಾರೆ. ಮೊದಲು ಕೈಕೇಯಿಯು ಬಂದು ಶ್ರೀರಾಮನನ್ನು ಮೋಕ್ಷದ ಹಾದಿಯನ್ನು ತಿಳಿಸಲು ಕೇಳುತ್ತಾಳೆ. ಶ್ರೀರಾಮನು ತನ್ನ ಸಾರಥಿಯನ್ನು ಕರೆದು ಆಕೆಯನ್ನು ಸರಯೂ ನದಿಯ ಹತ್ತಿರ ಒಂದು ಆಡಿನ ಗುಂಪಿನ ಹತ್ತಿರ ಕರೆದುಕೊಂಡು ಹೋಗಲು ತಿಳಿಸಿ, ಆಕೆಗೆ 'ಅಲ್ಲಿ ಏನು ಕೇಳುತ್ತೀಯೋ ಅದರ ಬಗ್ಗೆ ಯೋಚಿಸಿ ನಿನಗೇನೆನಿಸುತ್ತದೆಯೋ ಹಾಗೆಯೇ ನಡೆದುಕೊ ' ಎಂದು ಹೇಳುತ್ತಾನೆ. ಅಲ್ಲಿ ಕೈಕೇಯಿಯು ಆಡುಗಳ ಮೇ, ಮೇ, ಮೇ, ಎನ್ನುವುದನ್ನು ಬಿಟ್ಟು ಬೇರೇನನ್ನೂ ಕೇಳುವುದಿಲ್ಲ. ಆದ್ದರಿಂದ ಅದರ ಬಗ್ಗೆಯೇ ಯೋಚಿಸಲು ಮೇ, ಮೇ, ಮೇ—ನನ್ನದು, ನನ್ನದು, ನನ್ನದು ಎನ್ನುವುದು ಆಕೆಗೆ ಮಾ-ಇಮೇ-ಮೇ— ಇವುಗಳೆಲ್ಲ ನನ್ನದು ಎನಬೇಡ ಎಂದು ತೋರಿತು. ಇದೇ ಶ್ರೀರಾಮ ತಿಳಿಸಿದ ಮಾರ್ಗ ಎಂದು ನಂಬಿ ನಾನು, ನನ್ನದು ಎನ್ನುವ ಭಾವವನ್ನು ಬಿಟ್ಟು ಮೋಕ್ಷವನ್ನು ಪಡೆದಳು.

ಸುಮಿತ್ರೆಯೂ ಶ್ರೀರಾಮನ ಬಳಿ ಮುಕ್ತಿಯ ಮಾರ್ಗವನ್ನು ತಿಳಿಸಲು ಕೇಳಿದಾಗ ಆಕೆಗೆ 'ನಾನು ಯಾರು' ಎಂದು ಯೋಚಿಸು ಎಂದು ಹೇಳಿದನು. ಅದರಂತೆ ಯೋಚಿಸಲು ಆರಂಭಿಸಿದ ಸುಮಿತ್ರೆಯು —ನಾನು ಸುಮಿತ್ರೆ, ಇಂಥವರ ಮಗಳು, ದಶರಥನ ಹೆಂಡತಿ, ಲಕ್ಷ್ಮಣ ಶತ್ರುಘ್ನರ ತಾಯಿ, ಅದಕ್ಕೂ ಮುಂಚೆ ಏನಾಗಿದ್ದೆ, ಆಮೇಲೆ ಏನಾಗುತ್ತೇನೆ, ಹುಟ್ಟುಸಾವುಗಳ ಹಿಂದೆ ಮುಂದೆ ಏನು ಎಂದು ಯೋಚಿಸುತ್ತಾ ಕೊನೆಗೆ ನಾನು ಎನ್ನುವುದೇ ಇಲ್ಲ ಎಂದು ತಿಳಿದು ನಿರ್ಮಮತೆಯಿಂದ ಮೋಕ್ಷವನ್ನು ಪಡೆದಳು.

ಕೌಸಲ್ಯೆಯೂ ಶ್ರೀರಾಮನ ಬಳಿ ಅದೇ ಕಾರಣಕ್ಕಾಗಿ ಹೋದಾಗ ಶ್ರೀರಾಮನು ಆಕೆಗೆ ದನದ ಕೊಟ್ಟಿಗೆಗೆ ಹೋಗಿ ಗೋಪೂಜೆ ಮಾಡಿ ಅದು ಏನು ಹೇಳುತ್ತದೋ ಹಾಗೆಯೇ ಮಾಡು ಎಂದನು. ಅಂತೆಯೇ ಕೌಸಲ್ಯೆ ದನದ ಕೊಟ್ಟಿಗೆಗೆ ಹೋಗಿ ಗೋಪೂಜೆ ಮಾಡಿದಾಗ ಆ ಗೋವು ಅಂಬಾ ಎಂದಿತು. ಅದು ಆಕೆಗೆ ಅಹಂ ಮಾ ಎಂದು ಕೇಳಿಸಿತು. ಅಂದರೆ ಅಹಂಭಾವವನ್ನು ಬಿಡು ಎಂದು. ಅದರಂತೆ ಆಕೆಯೂ ನಿರ್ಮಮತೆಯಿಂದಲೇ ಮೋಕ್ಷವನ್ನು ಪಡೆದಳು.

"ನಾವು ಮಧುವನ್ನು ಕುಡಿಯಲು ಬಂದೆವು. ಆದರೆ ನಮ್ಮ ಕೈಕಾಲುಗಳು ಅದರಲ್ಲಿ ಸಿಕ್ಕಿಕೊಂಡಿರುವುದು ಕಾಣುವುದು. ನಾವು ಆನಂದವನ್ನು ಅನುಭವಿಸುವುದಕ್ಕೆ ಬಂದೆವು. ಆದರೆ ಮತ್ತಾರೊ ನಮ್ಮಿಂದ ಆನಂದವನ್ನು ಅನುಭವಿಸುತ್ತಿರುವರು. ನಾವು ಆಳುವುದಕ್ಕೆ ಬಂದೆವು, ಆದರೆ ಮತ್ತಾರೊ ನಮ್ಮನ್ನು ಆಳುತ್ತಿರುವರು. ನಾವು ಕೆಲಸ ಮಾಡುವುದಕ್ಕೆ ಬಂದೆವು, ಆದರೆ ಮತ್ತಾರೊ ನಮ್ಮಿಂದ ಅದನ್ನು ಮಾಡಿಸುತ್ತಿರುವರು. ಯಾವಾಗಲೂ ನಮಗೆ ಇದು ಕಾಣುವುದು."

— ಸ್ವಾಮಿ ವಿವೇಕಾನಂದ

ಮಹಾಭಾರತದ ಮಹಾಪ್ರಸ್ಥಾನಪರ್ವದಲ್ಲಿ ಪಾಂಡವರು ತಮ್ಮ ಕೊನೆಯ ಪ್ರಯಾಣವನ್ನು ಮಾಡಲು ಹಸ್ತಿನಾಪುರವನ್ನು ಬಿಟ್ಟು ಭೂಪ್ರದಕ್ಷಿಣೆ ಮಾಡಿಕೊಂಡು ಉತ್ತರಕ್ಕೆ ಹೋಗುತ್ತಿರುವಾಗ ಸಹದೇವ, ನಕುಲ, ಅರ್ಜುನ, ಭೀಮ ಇವರುಗಳು ಒಬ್ಬರ ನಂತರ ಒಬ್ಬರು ಬಿದ್ದು ಸಾಯುತ್ತಾರೆ. ಪ್ರತಿಯೊಬ್ಬರು ಬಿದ್ದಾಗಲೂ ಭೀಮನು 'ಅವರುಗಳು ಧರ್ಮವನ್ನು ಎಂದೂ ಮೀರಿದವರಲ್ಲ, ಹಾಗಾದರೂ ಏಕೆ ಬಿದ್ದರು?' ಎಂದು ಧರ್ಮರಾಯನನ್ನು ಕೇಳುತ್ತಾನೆ. ಅದಕ್ಕೆ ಧರ್ಮರಾಯನು ಉತ್ತರವಾಗಿ 'ಸಹದೇವನಿಗೆ ತನ್ನಂತಹ ಬುದ್ಧಿವಂತರು ಯಾರೂ ಇಲ್ಲವೆಂಬ ಅಹಂಭಾವ, ನಕುಲನಿಗೆ ತನ್ನಂತಹ ಸುಂದರರು ಯಾರೂ ಇಲ್ಲವೆಂಬ ಅಹಂಭಾವ, ಅರ್ಜುನನಿಗೆ ತನ್ನಂತಹ ಬಿಲ್ಲು ವಿದ್ಯಾ ಪ್ರವೀಣರು ಯಾರೂ ಇಲ್ಲವೆಂಬ ಅಹಂಭಾವ ಇದ್ದದ್ದರಿಂದ ಹೀಗಾಯಿತೆ'ನ್ನುತ್ತಾನೆ. ತನ್ನಂತಹ ಬಲವಂತನು ಯಾರೂ ಇಲ್ಲವೆಂಬ ಅಹಂಭಾವವಿದ್ದ ಭೀಮನೂ ಅವರಂತೆಯೇ ಬಿದ್ದುಹೋಗುತ್ತಾನೆ. ಅವರಲ್ಲಿ ಯಾರೂ ಧರ್ಮರಾಯನೊಂದಿಗೆ ಬಾಳಿನ ಪ್ರಯಾಣದ ಕೊನೆಯವರೆಗೂ ಬರಲಾಗಲಿಲ್ಲ. ಆದರೆ ಪೂರ್ಣ ನಿರಹಂಕಾರಿಯಾಗಿದ್ದ ಧರ್ಮರಾಯನಾದರೋ ಯಾತ್ರೆಯನ್ನು ಮುಗಿಸಿ ಮುಕ್ತಿಯನ್ನು ಪಡೆಯುತ್ತಾನೆ. ಹಾಗಾಗಿ ಈ ಘಟನೆ ಯಾವುದೇ ರೀತಿಯ ಅಹಂಭಾವ, ಮಮತೆ ಇದ್ದರೂ ಮೋಕ್ಷ ದೊರಕದು, ನಿರ್ಮಮತೆಯೇ ಮೋಕ್ಷಕ್ಕೆ ದಾರಿ ಎಂದು ತೋರಿಸುತ್ತದೆ.

ಜೈನರ ಆದಿಪುರಾಣದಲ್ಲಿ ಮೊದಲ ತೀರ್ಥಂಕರ ವೃಷಭದೇವನ ಮಕ್ಕಳಾದ ಭರತ ಮತ್ತು ಬಾಹುಬಲಿಯವರ ಪ್ರಸಂಗ ಬರುತ್ತದೆ. ಚಕ್ರವರ್ತಿಯಾದ ಹಿರಿಯ ಅಣ್ಣ ಭರತನಿಗೆ ಅಧೀನನಾಗಿರಲು ಒಪ್ಪದ ಬಾಹುಬಲಿ ಅವನೊಡನೆ ಯುದ್ಧ ಮಾಡಿ ಅವನನ್ನು ಸೋಲಿಸುತ್ತಾನೆ. ಆದರೆ ಇಡೀ ಚಕ್ರಾಧಿಪತ್ಯವನ್ನು ತ್ಯಾಗ ಮಾಡಿ ಅಣ್ಣನಿಗೆ ಒಪ್ಪಿಸಿ ತಪಸ್ಸಿಗೆ ಹೋಗುತ್ತಾನೆ. ಅವನ ಆ ತ್ಯಾಗವನ್ನು ಗೌರವಿಸಿ ಇಂದಿಗೂ ಬಾಹುಬಲಿಗೆ (ಗೊಮ್ಮಟೇಶ್ವರನಿಗೆ) ಪೂಜೆ ಇತ್ಯಾದಿ ನಡೆಯುತ್ತದೆ. ಆದರೆ ಬಾಹುಬಲಿಯು ಅನೇಕ ವರ್ಷ ತಪಸ್ಸು ಮಾಡಿದರೂ ಅವನಿಗೆ ಮುಕ್ತಿ ದೊರೆಯುವುದಿಲ್ಲ. ಆಗ ಆದಿ ತೀರ್ಥಂಕರನು ಅವನಲ್ಲಿಗೆ ಬಂದು 'ನೀನು ಸರ್ವವನ್ನು ಅಣ್ಣನಿಗೆ ಕೊಟ್ಟಮೇಲೆ ಅವನ ಜಾಗದಲ್ಲೇ ನಿಂತಿದ್ದೀನಲ್ಲ ಎಂಬ ಭಾವನೆ ನಿನ್ನ ಮನಸ್ಸಿನಲ್ಲಿದೆ. ಆ "ನಾನು" ಎಂಬ ಭಾವನೆಯನ್ನು ಬಿಡು' ಎಂದು ಉಪದೇಶಿಸಲು ಅದರಂತೆ ಬಾಹುಬಲಿಯು ನಿರ್ಮಮನಾಗಿ ಮೋಕ್ಷವನ್ನು ಪಡೆಯುತ್ತಾನೆ.

ಯಾವುದೊ ತೀರ್ಥಕ್ಷೇತ್ರಕ್ಕೆ ಹೋಗುತ್ತಿರುವ ಯಾತ್ರಿಕನು ಮಧ್ಯದಲ್ಲಿ ಛತ್ರಗಳಲ್ಲಿಯೋ ಹೋಟೆಲುಗಳಲ್ಲಿಯೋ ಕೆಲವು ಕಾಲ ತಂಗುತ್ತಾನೆ. ಅಲ್ಲಿರುವಾಗ 'ಇದು ನನ್ನ ಕೊಠಡಿ', 'ಇದು ನನ್ನ ಹಾಸಿಗೆ' ಎಂದು ಮುಂತಾಗಿ ಹೇಳುತ್ತಾನೆ. ಮರುದಿನವೇ ಅವೆಲ್ಲವನ್ನೂ ಬಿಟ್ಟುಹೋಗುತ್ತಾನೆ. ಅವಾವುವೂ ಅವನವಲ್ಲ, ಕೇವಲ ತಾತ್ಕಾಲಿಕವಾಗಿ ಅವನವಾಗಿರುತ್ತವೆ. ಅಷ್ಟೆ, ನಿರ್ದಿಷ್ಟ ಅವಧಿಗಿಂತ ಹೆಚ್ಚು ಕಾಲ ಅವನು ಅಲ್ಲಿ ತಂಗುವಂತೆಯೂ ಇಲ್ಲ.

ಹಾಗೆಯೇ ಈ ಜೀವನವೂ ಒಂದು ಯಾತ್ರೆ. ಇಲ್ಲಿ ನಾವು ಪಡೆಯುವುದಾವುದೂ ಶಾಶ್ವತವಾಗಿ ನಮ್ಮದಲ್ಲ. ಈ ದೇಹವೊಂದು ತಂಗುದಾಣವಷ್ಟೆ. ಇದರಲ್ಲಿರುವವರೆಗೆ 'ಈ ದೇಹ ನನ್ನದು', 'ಈ ಮನೆ ನನ್ನದು', 'ಇವರೆಲ್ಲ ನನ್ನವರು', 'ಈ ವಸ್ತುಗಳೆಲ್ಲ ನನ್ನವು' ಎಂದು ಮುಂತಾಗಿ ಹೇಳುತ್ತೇವೆ. ಆದರೆ ಇಲ್ಲಿ 'ನನ್ನದು' ಎಂದು ಕರೆಯಬಹುದಾದದ್ದು ಯಾವುದೂ ಇಲ್ಲ. ಈ ದೇಹೇಂದ್ರಿಯಮನಸ್ಸುಗಳು, ವಿಷಯವಸ್ತುಗಳು ಎಲ್ಲವೂ ಪ್ರಕೃತಿಗೆ ಸೇರಿದವು, ಎಲ್ಲವೂ ಪ್ರಕೃತಿಯಿಂದ ನಿರ್ಮಿತವಾದವುಗಳು. ನಾವು ಮಾಡುವುದೇನಿದ್ದರೂ ಪ್ರಕೃತಿದತ್ತ ವಸ್ತುಗಳನ್ನು ರೂಪಾಂತರಗೊಳಿಸುವುದಷ್ಟೇ. ಕುಂಬಾರನು ಮಣ್ಣನ್ನು ತೆಗೆದುಕೊಂಡು, ಅದಕ್ಕೆ ಮಡಕೆಯ ರೂಪವನ್ನು ಕೊಟ್ಟು 'ಆ ಮಡಕೆ ನನ್ನದು' ಎನ್ನುತ್ತಾನೆ. ಪ್ರಕೃತಿ ದತ್ತವಾದ ಮಣ್ಣು, ಕಲ್ಲು, ಮರ ಇತ್ಯಾದಿಗಳನ್ನು ಬಳಸಿ ಮನೆಯನ್ನು ಕಟ್ಟಿ, 'ಈ ಮನೆ ನನ್ನದು' ಎನ್ನುತ್ತೇವೆ. ಹಾಗೆಯೆ ಪ್ರಕೃತಿಗೆ ಸೇರಿದ ನೆಲ, ನೀರು ಆಕಾಶಾದಿಗಳನ್ನು ವಿಭಾಗ ಮಾಡಿಕೊಂಡು 'ಇದು ನಮ್ಮದು' ಅಥವಾ 'ನನ್ನದು' ಎನ್ನುತ್ತೇವೆ. ಆದರೆ ನಮ್ಮದಾಗಿ ನಮ್ಮೊಂದಿಗೆ ಉಳಿಯುವಂತಹುದು ಯಾವುದೂ ಇಲ್ಲ. ಆದರೂ ಎಲ್ಲವನ್ನೂ 'ನನ್ನದು' ಎಂದು ಹೇಳಿಕೊಂಡು ಎಲ್ಲವನ್ನೂ 'ನನ್ನ' ದಾಗಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ಎಲ್ಲವನ್ನೂ ನಮ್ಮ ವಶ ಮಾಡಿಕೊಳ್ಳುವ ಪ್ರಯತ್ನದಲ್ಲಿ ನಾವು ಅವುಗಳ ವಶರಾಗುತ್ತೇವೆ. ಒಂದು ನೊಣವು ಹಲಸಿನ ಹಣ್ಣನ್ನು ರುಚಿನೋಡಲು ಹೋಗಿ ಅದರ ಮೇಣಕ್ಕೆ ಅಂಟಿಕೊಂಡಂತೆ ಆಗುತ್ತದೆ ನಮ್ಮ ಸ್ಥಿತಿ. ಕುಲಾರ್ಣವ ತಂತ್ರದಲ್ಲಿ ಹೀಗೆ ಹೇಳಿದೆ:

> ದ್ವೇ ಪದೇ ಬಂಧಮೋಕ್ಷಾಯ ಮಮೇತಿ ನಿರ್ಮಮೇತಿ ಚ |
> ಮಮೇತಿ ಬಧ್ಯತೇ ಜಂತುರ್ನಮಮೇತಿ ವಿಮುಚ್ಯತೇ ||

'ಬಂಧ ಮೋಕ್ಷಗಳನ್ನು ಸೂಚಿಸುವ ಎರಡು ಪದಗಳಿವೆ. "ನನ್ನದು" ಎಂದರೆ ಬಂಧ ಹಾಗೂ "ನನ್ನದಲ್ಲ" ಎಂದರೆ ಮೋಕ್ಷ.'

ಮಾರ್ಕಂಡೇಯ ಪುರಾಣದಲ್ಲಿ ಬರುವ ಒಂದು ದೃಷ್ಟಾಂತವನ್ನು ನೋಡೋಣ. ಒಬ್ಬ ವ್ಯಕ್ತಿಯ ಮನೆಯಲ್ಲಿ ಇಲಿ ಸೇರಿಕೊಂಡಿದೆ. ಅವನು ತನ್ನ ಮನೆಯಲ್ಲಿ ಒಂದು ಗಿಳಿಯನ್ನೂ ಸಾಕಿದ್ದ. ಇಲಿ ಸೇರಿಕೊಂಡ ಪ್ರಾಣಿ, ಗಿಳಿ ಸಾಕಿದ ಪ್ರಾಣಿ. ಒಮ್ಮೆ ಗಿಳಿ ಬೆಕ್ಕಿನ ಬಾಯಿಗೆ ತುತ್ತಾಯಿತು. ಇದರಿಂದ ಅವನ ಮನಸ್ಸಿಗೆ ತುಂಬ ಖೇದ ವುಂಟಾಯಿತು. ಇನ್ನೊಮ್ಮೆ ಬೆಕ್ಕು ಇಲಿಯನ್ನು ಹಿಡಿದುಕೊಂಡು ಹೋಯಿತು. ಅಂತೂ ಕಾಟ ತಪ್ಪಿತಲ್ಲ ಎಂದು ಆಗ ಸಂತೋಷ ಪಡುತ್ತಾನೆ. ಇಲಿ ಮತ್ತು ಗಿಳಿ ಎರಡೂ ಅವನ ಮನೆಯಲ್ಲೇ ಇದ್ದವು. ಒಂದರ ಮೇಲೆ ಅವನಿಗೆ ಮಮಕಾರ, ಇನ್ನೊಂದರ ಮೇಲೆ ತಿರಸ್ಕಾರ. ಆದ್ದರಿಂದ ಮನುಷ್ಯನನ್ನು ಬಂಧಿಸುವುದು ನಿಜವಾಗಿಯೂ ವಸ್ತುಗಳಲ್ಲ, **ಆದರೆ ಅವುಗಳ ಮೇಲಿನ ಮಮಕಾರ.**

**ಈ ವಿಷಯದಲ್ಲಿ ಶ್ರೀರಾಮಕೃಷ್ಣರು** ಒಂದು ಎತ್ತಿನ ಉದಾಹರಣೆಯನ್ನು ಕೊಡುತ್ತಾರೆ. ಅದು ಯಾವಾಗಲೂ ಹಂಬಾ, ಹಂಬಾ, ನಾನು ನಾನು ಎನ್ನುತ್ತಿರುತ್ತದೆ. ಅದಕ್ಕೇ ಅದು ಅಷ್ಟೊಂದು ಕಷ್ಟಕ್ಕೀಡಾಗುತ್ತದೆ. ನೇಗಿಲಿಗೆ ಕಟ್ಟಿ ಮಳೆ ಬಿಸಿಲೆನ್ನದೆ ಉಳುತ್ತಾರೆ. ಸತ್ತಮೇಲೂ ಅದರ ಚರ್ಮದಲ್ಲಿ ನಗಾರಿ ಮಾಡಿ ಚೆನ್ನಾಗಿ ಬಡಿಯುತ್ತಾರೆ, ಚಪ್ಪಲಿ ಮಾಡಿ ಚೆನ್ನಾಗಿ ತುಳಿಯುತ್ತಾರೆ. ಆದರೂ ಅದರ ಕಷ್ಟ ತಪ್ಪುವುದಿಲ್ಲ. ಕೊನೆಗೆ ಅದರ ಕರುಳಿನ ಹಗ್ಗವನ್ನು ಹತ್ತಿ ಎಕ್ಕುವ ಯಂತ್ರಕ್ಕೆ ಕಟ್ಟುತ್ತಾರೆ. ಆಗ ಅದು ತುಹ್ಹು, ತುಹ್ಹು —ನೀನು ನೀನು ಎನ್ನುತ್ತದೆ. ಅದರ ಕಷ್ಟ ಕೊನೆಗೊಳ್ಳುತ್ತದೆ.

ಆದ್ದರಿಂದ ನಾವು ಅಹಂಭಾವವನ್ನು —ನಾನು, ನನ್ನದು ಎಂಬ ಭಾವನೆಯನ್ನು ಬಿಟ್ಟು ಬಾಳಿದರೆ ಮುಕ್ತಿಯನ್ನು ಪಡೆಯಬಹುದು. ಪರಮಹಂಸರು ಹೇಳುವ ಹಾಗೆ ಪೂರ್ಣವಾಗಿ ನಾನು ಎಂಬುದನ್ನು ಬಿಡಲು ಸಾಧ್ಯವಿಲ್ಲದಿದ್ದರೆ ಅದು ದಾಸೋಽಹಂ ಆಗಿ ಉಳಿಯಲಿ.

ಸ್ವಾಮಿ ವಿವೇಕಾನಂದರು 'ಎಲ್ಲಿ ನಾನು ಎಂಬುದಿಲ್ಲದೆ ಸಕಲವೂ ನೀನೇ ಎಂಬುದಾಗಿದೆಯೊ ಆ ಸತ್ಯ ಸಂಪೂರ್ಣ. ಆತ್ಮ ನಿರಾಕರಣವೇ ಪರಮಾದರ್ಶ. ನೀವು ನಿಮ್ಮನ್ನು ಜಯಿಸಿದರೆ ಇಡೀ ಪ್ರಪಂಚವೇ ನಿಮ್ಮದಾಗುವುದು. ಸತ್ಕರ್ಮದ ಬಂಧನಕ್ಕೆ, ಕೀರ್ತಿಯ ಆಸೆಗೆ ಬೀಳಬೇಡಿ. ಯಾರು ಈ ರಹಸ್ಯವನ್ನು ಅರಿತು ನಾನು ಎಂಬುದನ್ನು ಬಿಡುವರೋ ಅವರು ಜನನ ಮರಣಗಳಿಂದ ಪಾರಾಗಿ ಅಮೃತಾತ್ಮರಾಗುವರು' ಎಂದಿದ್ದಾರೆ.

ನಾವು ಬೇರೆಯವರಿಗೆ ನಮಸ್ಕರಿಸುವಾಗ ನಮಃ, ನಮಸ್ತೇ ಎನ್ನುತ್ತೇವೆ. ಅದೂ ಕೂಡ ಮಃ = ನನ್ನದು, ನ = ಇಲ್ಲ, ತೇ=ನಿನ್ನದು ಎಂದಾಗುತ್ತದೆ. ಹಾಗಾಗಿ ನಾನು ಎಂಬೀ ಅಹಂ ಭಾವವನ್ನು ಬಿಟ್ಟು ಮುಕ್ತಿಯನ್ನು ಪಡೆಯೋಣ.

ಪೂಜ್ಯ ಡಿ.ವಿ.ಜಿಯವರು ತಮ್ಮ ಮರುಳಮುನಿಯನ ಕಗ್ಗದಲ್ಲಿ ಹೇಳಿರುವಂತೆ,

**ಮೊದಲು ನಾನ್, ಎನಗೆ ಮೊದಲೂಟ, ಮೊದಲಿನ ಪೀಠ**
**ಮೊದಲು ನಾನ್, ಎನ್ನವರು ಬಳಿಕ ಉಳಿದವರು**
**ಇದು ಲೋಕದೆಲ್ಲ ಕಲಹಗಳ ದುಃಖದ ಮೂಲ**
**ಅದುಮಿಕೋ ಅಹಂಕೆಯನ್ನು ಮರುಳಮುನಿಯ**
**—ನಿರ್ಮಮತೆಯೇ ಮೋಕ್ಷ ಮರುಳಮುನಿಯ**

*

---

**ತ್ಯಕ್ತವ್ಯೋ ಮಮಕಾರಃ, ತ್ಯಕ್ತುಂ ಯದಿ ಶಕ್ಯಸೇ**
**ನೋ ಚೇತ್ ಕರ್ತವ್ಯೋ ಮಮಕಾರಃ**
**ಕಿಂ ತು ಸ ಸರ್ವತ್ರ ಕರ್ತವ್ಯಃ |**

**ಮಮಕಾರವನ್ನು ತ್ಯಜಿಸಬೇಕು. ಒಂದುವೇಳೆ ಅದನ್ನು ತ್ಯಜಿಸಲು ಆಗದಿದ್ದರೆ ಜಗತ್ತಿನ ಎಲ್ಲ ವಿಷಯದಲ್ಲಿಯೂ ಮಮಕಾರವನ್ನು ಬೆಳಸಿಕೊಳ್ಳಬೇಕು. ಅಂದರೆ ಇಡೀ ಜಗತ್ತಿನೊಂದಿಗೆ ತಾದಾತ್ಮ್ಯವನ್ನು ಹೊಂದಬೇಕು.**

## ಅಹಂಕಾರವೇ ಬಂಧನ

ಒಬ್ಬ ರಾಜನು ಮಹಾತ್ಮನೊಬ್ಬನನ್ನು ಪ್ರಶ್ನಿಸಿದನು.: 'ಪೂಜ್ಯರೇ ನಿಮಗೆ ೮೦ ವರ್ಷ ವಯಸ್ಸಾಗಿದೆ. ನಿಮ್ಮ ಪೂರ್ಣ ಜೀವನದ ಅನುಭವವನ್ನು ತಿಳಿಸಿರಿ.' ಆಗ ಮಹಾತ್ಮನು, ತನ್ನ ಬಾಯಿಯನ್ನು ತೆರೆದು ತೋರಿಸಿ, 'ಇದೇ ನನ್ನ ಜೀವನದ ಅನುಭವ' ಎಂದನು! 'ನನಗೆ ಏನೂ ತಿಳಿಯಲಿಲ್ಲ' ಎಂದ ಅರಸ.

'ಮಗು, ಮೊದಲು ನಾಲಗೆ, ನಂತರ ಕಠಿಣ ಹಲ್ಲುಗಳು ಬಂದಿದ್ದವು. ಆದರೆ ತಮ್ಮ ಕಠೋರ ಸ್ವಭಾವದ ಕಾರಣದಿಂದ ಹಲ್ಲುಗಳು ಕಳಚಿ ಬಿದ್ದವು. ಆದರೆ ಹಲ್ಲುಗಳು ಬರುವುದಕ್ಕಿಂತ ಮುಂಚಿತವಾಗಿ ಇದ್ದ ನಾಲಗೆಯು ಮಾತ್ರ, ತನ್ನ ಮೃದು ಸ್ವಭಾವದಿಂದ ಹಾಗೆಯೇ ಉಳಿದುಕೊಂಡಿದೆ.'

ಹಾಗೆಯೇ ಯಾರು ಅಹಂಕಾರದಿಂದ 'ನಾನು, ನನ್ನದು' ಎನ್ನುತ್ತಾನೆಯೋ ಅವನು, ಜನ್ಮ-ಮೃತ್ಯುವಿನ, ಸುಖ-ದುಃಖದ, ಸ್ವರ್ಗ-ನರಕಗಳಲ್ಲಿ ಬಂಧಿತನಾಗಿರುತ್ತಾನೆ. (ವಿವೇಕಹಂಸ, ಮೇ ೨೦೦೧ ಸಂಚಿಕೆಯಿಂದ)